**ಓ ಎಸ್ ನಂಃ 40/2022**
**ಡಿ ಡಬ್ಲ್ಯೂ ಃ 1**

**ದಿಃ 17.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಂ ಆರ್ ಆರ್ ವಕೀಲರಿಂದಃ**

ತಮ್ಮ ಅತ್ತೆಯವರು ತಮಗೆ ಸಾಮಾನ್ಯ ಮುಕ್ತರ್ ನಾಮೆ ಪತ್ರ ಬರೆದುಕೊಡುವುದಕ್ಕಿಂತ ಮುಂಚೆ ತಮ್ಮ ಅತ್ತೆಯವರೇ ಈ ದಾವೆಯ ಕಲಾಪಗಳಿಗೆ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು ಎಂದರೆ ಸರಿ. ತಮ್ಮ ಅತ್ತೆಯವರಿಗೆ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ನಾಟಿ ಔಷಧಿಯ ಚಿಕಿತ್ಸೆಯನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯ ಸಂಗತಿಗಳ ಎಲ್ಲ ವಿಚಾರಗಳು ತಮ್ಮ ಅತ್ತೆಯವರಿಗೆ ಚೆನ್ನಾಗಿ ಗೊತ್ತು ಎಂದರೆ ಸರಿ. ತಮ್ಮ ಅತ್ತೆಯವರು ಚೆನ್ನಾಗಿ ಕುಳಿತುಕೊಳ್ಳುತ್ತಾರೆ ಹಾಗು ಚೆನ್ನಾಗಿ ಮಾತನಾಡುತ್ತಾರೆ ಎಂದರೆ ಸಾಕ್ಷಿಯು ಅವರಿಗೆ ಅಧಿಕ ರಕ್ತದೊತ್ತಡ ಇರುವ ಕಾರಣ ಅವರಿಗೆ ತಲೆ ಸುತ್ತು ಬಂದು ಬಿದ್ದು ಹೋಗುತ್ತಾರೆ ಎಂದು ನುಡಿಯುತ್ತಾರೆ. ತಮ್ಮ ಅತ್ತೆಯವರು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ಸತ್ಯಾಂಶ ಹೊರಬರುತ್ತದೆ ಎಂಬ ಉದ್ದೇಶದಿಂದ ತಮ್ಮ ಅತ್ತೆಯವರು ಸಾಮಾನ್ಯ ಅಧಿಕಾರ ಪತ್ರವನ್ನು ಬರೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಇಂಗ್ಲೀಷ್ ಭಾಷೆ ಓದಲು ಬರುವುದಿಲ್ಲ. ನಿಡಿ 1 ದಾಖಲಾತಿಯಲ್ಲಿ ತಮ್ಮ ಅತ್ತೆಯವರಿಗೆ ಅಧಿಕ ರಕ್ತದೊತ್ತಡ ಇದೆ ಎಂಬುದಾಗಿ ನಮೂದು ಮಾಡಿಲ್ಲ ಎಂದರೆ ಸರಿ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಒಕ್ಕಣೆ ಆಂಗ್ಲ ಭಾಷೆಯಲ್ಲಿ ಬರೆಯಲಾಗಿದೆ ಅದನ್ನು ಓದಿ ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ನಮ್ಮ ವಕೀಲರು ಓದಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ವೆಂಕಟರಮಣಯ್ಯ ರವರ ಹೆಂಡತಿಯ ಹೆಸರು ವೆಂಕಟರಂಗಮ್ಮ ಎಂದರೆ ಸರಿ. ಸದರಿ ರವರಿಗೆ ಇಬ್ಬರು ಮಕ್ಕಳು ಎಂದರೆ ಸರಿ. ಅವರ ಹೆಸರು 1) ನಂಜುಂಡಯ್ಯ 2) ನಾರಾಯಣಪ್ಪ. ನಂಜುಂಡಯ್ಯನವರು ಯಾವಾಗ ಮರಣ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾರಾಯಣಪ್ಪನವರು 2007 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ನಂಜುಂಡಯ್ಯನವರನ್ನು ತಾವು ನೋಡಿರುವುದಿಲ್ಲ ಎಂದರೆ ಸರಿ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೀರಿ ನಂಜುಂಡಯ್ಯ ನವರಿಗೆ ಬುದ್ದಿ ಬ್ರಮಣ ಆಗಿತ್ತು ಎಂದು ತಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿ. ವೆಂಕಟರಮಣಯ್ಯನವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಇದ್ದಾರೆ ಎಂಬ

ಓ ಎಸ್ ನಂಃ 40/2022
ಡಿ ಡಬ್ಲ್ಯೂ ಃ 1

ವಿಚಾರ ನನಗೆ ಗೊತ್ತಿಲ್ಲ. ವೆಂಕಟರಮಣಯ್ಯನವರಿಗೆ ಪುಟ್ಟಯ್ಯ, ಪಾಪಯ್ಯ, ಸೀನಯ್ಯ ಎಂಬ ಸಹೋದರರಿದ್ದರು. ಅದೇ ರೀತಿ ರಂಗಮ್ಮ ಎಂಬ ಸಹೋದರಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಈ ರಂಗಮ್ಮನ 5 ನೇ ಮಗಳೇ ಈ ದಾವೆಯ ವಾದಿ ಎಂದರೆ ಸರಿಯಲ್ಲ. ವೆಂಕಟರಮಣಯ್ಯ ತಮ್ಮ ಮೊದಲನೇ ನಂಜುಂಡಯ್ಯ ನವರಿಗೆ ತನ್ನ ತಂಗಿಯ 5 ನೇ ಮಗಳು ಲಕ್ಷ್ಮಮ್ಮ ನವರಿಗೆ ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಲಕ್ಷ್ಮಮ್ಮ ನವವೇ ಈ ಕೇಸಿನ ವಾದಿ ಎಂದರೆ ಸರಿ. ವೆಂಕಟರಮಣಯ್ಯ ಬದುಕಿದ್ದಾಗಲಾಗಲಿ, ನಂಜುಂಡಯ್ಯನವರು, ನಾರಾಯಣಪ್ಪನವರ ಜೀವಿತಾವಧಿಯಲ್ಲಿ ವಿಭಾಗ ಆಗಿದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಸ್ವತಃ ಮುಂದುವರಿದು ನಾರಾಯಣಪ್ಪನವರ ಜೀವಿತಾವಧಿಯಲ್ಲಿ ವಿಭಾಗ ಆಗಿದೆ ಎಂದು ಸ್ವತಃ ನುಡಿಯುತ್ತಾರೆ.

**ಮುಂದುವರಿದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**